ಸಹಿ, ಅಸಲು ಸಹಿ ಹಾಗೂ ಆರೋಪಿಗಳಾದ ಎ.ಮಂಜುನಾಥ ಮತ್ತು ವೀರಭದ್ರಯ್ಯ ರವರಿಂದ ಪಿರ್ಯಾದುದಾರರ ಮತ್ತು ಬಿ.ಪಿ.ಪ್ರಭುದೇವ್ ರವರು ರುಜು ಮಾಡುವ ರೀತಿಯಲ್ಲಿ ಅವರುಗಳಿಂದ ಸಹಿ ಪಡೆದು ಚೆಕ್‌ನಲ್ಲಿರುವ ಸಹಿಗೂ ಮತ್ತು ತನಿಖಾ ಕಾಲದಲ್ಲಿ ಪಡೆದಿರುವ ಸಹಿಗಳಿಗೂ ಪರೀಕ್ಷೆ ಮಾಡಿ ವರದಿ ನೀಡಲು ಕೋರಿ ಬೆಂಗಳೂರು ಎಫ್.ಎಸ್.ಎಲ್ ತಜ್ಞರ ಬರವಣಿಗೆ ತಜ್ಞರಲ್ಲಿಗೆ ಕಳುಹಿಸಿಕೊಡಲಾಗಿದೆ. ಎಫ್.ಎಸ್.ಎಲ್. ಕಛೇರಿಯ ಕೈಬರಹ ವಿಭಾಗದ ಕ್ರಮ ಸಂಖ್ಯೆ: ಎಫ್.ಎಸ್.ಎಲ್. ಕ್ಯೂಡಿ: 2010ರ ವರದಿಯನ್ನು ದಿನಾಂಕ: 22–07–2010 ಕ್ಕೆ ನೀಡುವುದಾಗಿ ಸ್ವೀಕೃತಿ ನೀಡಿರುತ್ತಾರೆ. ಎಫ್.ಎಸ್.ಎಲ್. ನವರಿಂದ ವರದಿಯು ಬರಬೇಕಾಗಿರುತ್ತದೆ. ಸಾಕ್ಷಿದಾರರ ವಿಚಾರಣೆ ನಡೆಸಿರುತ್ತೆ, ತನಿಖೆ ಮುಂದುವರೆದಿದೆ. ಎಫ್.ಎಸ್.ಎಲ್. ನವರಿಂದ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಂಡು, ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗುವುದು.

ಮಾಗಡಿ ತಾಲ್ಲೂಕಿಗೆ ಒಂದು ಪೊಲೀಸ್ ಹೊರ ಠಾಣೆ ಪ್ರಾರಂಭಿಸುವುದು.

112 (443) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ ಸಾವನದುರ್ಗ ಅರಣ್ಯ ಪ್ರದೇಶದ ಸುತ್ತಮುತ್ತ ದಿನೇ ದಿನೇ ಕೊಲೆ ಸುಲಿಗೆಗಳು ಹೆಚ್ಚಾಗುತ್ತಿದ್ದು, ಈ ಪ್ರದೇಶದಲ್ಲಿ ಒಂದು ಪೊಲೀಸ್ ಹೊರಠಾಣೆ (Out Post) ಯನ್ನು ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ;

ಆ) ಈ ಅರಣ್ಯ ಪ್ರದೇಶದ ಸುತ್ತಲೂ 15 ಕಿ.ಮೀ. ವ್ಯಾಪ್ತಿಯಲ್ಲಿ ಪೊಲೀಸ್ ಠಾಣೆ ಇಲ್ಲದೆ ಇರುವುದರಿಂದ ಸುತ್ತಮುತ್ತಲ ಸುಮಾರು 50 ಹಳ್ಳಿಗಳ ಜನರು ಭಯಬೀತಿಯಿಂದ ಜೀವನ ನಡೆಸಬೇಕಾಗಿದ್ದು, ಇದೊಂದು ಗಂಭೀರವಾದ ವಿಷಯವಾಗಿರುವುದರಿಂದ ಇನ್ನೆಷ್ಟು ದಿನದಲ್ಲಿ ಈ ಪೊಲೀಸ್ ಹೊರಠಾಣೆಯನ್ನು ಪ್ರಾರಂಭಿಸಲಾಗುವುದು?

ಶ್ರೀ ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು) :

ಅ) ಮತ್ತು ಆ) ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ ಸಾವನದುರ್ಗದಲ್ಲಿ ಪೊಲೀಸ್ ಹೊರಠಾಣೆಯ ಅವಶ್ಯಕತೆ ಇರುತ್ತದೆ. ಇಲ್ಲಿಗೆ ಹೊರಠಾಣೆಯ ಮಂಜೂರಾತಿಗಾಗಿ ಕ್ರಮ ಕೈಗೊಳ್ಳಲು ಪರಿಶೀಲಿಸ ಲಾಗುವುದು.